(ಇಂದು ದಿನಾಂಕಃ **31-10-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಎಸ್ ಎ ಸಿ ವಕೀಲರಿಂದ:**

ನನ್ನ ಮದುವೆಗೆ ಸುಮಾರು 400 ರಿಂದ 500 ಜನ ಸೇರಿದ್ದರು. ನಾನು ಮೂಗಪ್ಪನ ಜೊತೆ ಮದುವೆಯಾಗಿ 7 ರಿಂದ 8 ವರ್ಷ ಸಂಸಾರ ಮಾಡಿದ್ದೇನು. ನಾನು ಮೂಗಪ್ಪನ ಜೊತೆ ಇದ್ದಾರೆ ರೇಷನ ಕಾರ್ಡ ಮತ್ತು ಚುನಾವಣಾ ಗುರುತಿನ ಚೀಟಿಯನ್ನು ಮಾಡಿಸಿದ್ದೇನೆ . ಅವುಗಳನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ. ನಾನು ಮೂಗಪ್ಪನ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ನಾನು ಮೂಗಪ್ಪನ ಅಕ್ಕನ ಮಗಳು ಎಂದರೆ ಸರಿ.

2. ನಾನು ಮೂಗಪ್ಪ ಮತ್ತು ಅವರ ತಮ್ಮಂದಿರು ಎಲ್ಲರೂ ಒಟ್ಟು ಕುಟುಂಬದಲ್ಲಿದ್ದೇವು. ಚೆನ್ನಪ್ಪ ಎಂದರೆ ನನ್ನ ತಾಯಿಯ ತಂದೆ . ಮೂಲತಃ ಅದು ಚೆನ್ನಪ್ಪನವರಿಗೆ ಸೇರಿತ್ತು ಎಂದರೆ ಸರಿ. ಚೆನ್ನಪ್ಪನವರು ಜೀವಿತ ಅವಧಿಯಲ್ಲಿ ಅವರ ಮಕ್ಕಳ ನಡುವೆ ಪಾಲು ಆಗಿತ್ತು ಎಂದರೆ ಸರಿ ಆದರೆ ಒಂದು ಆಸ್ತಿ ಪಾಲು ಆಗಿಲ್ಲ ಎನ್ನುತ್ತಾರೆ. ಸರ್ವೇ ನಂಃ 164 ರಲ್ಲಿ ಸುಮಾರು 6 ಎಕರೆ 35 ಗುಂಟೆ ಪಾಲು ಆಗಿಲ್ಲ ಎನ್ನುತ್ತಾರೆ.

3. ಮೂಗಪ್ಪನವರು ಅವರ ಜೀವಿತಾವಧಿಯಲ್ಲಿ ನಾನು ಅವರ ಹೆಂಡತಿ ಅಲ್ಲ ಎಂದು ನನ್ನ ಮೇಲೆ ದಾವೆ ಮಾಡಿದ್ದರು ಎಂದರೆ ಸರಿ. ಮದುವೆಯಾಗಿ 7 ರಿಂದ 8 ವರ್ಷ ಸಂಸಾರ ಮಾಡಿದ್ದು, ನಂತರ ನಾನು ನನ್ನ ತವರು ಮನೆಯಲ್ಲಿದ್ದೇನು. ನನ್ನ ಗಂಡ ಸುಖ ಸುಮ್ಮನೆ ಗಲಾಟೆ ಮಾಡಿ ನನ್ನನ್ನು ಹೊರ ಹಾಕಿದರು. ನಾನು ನನ್ನ ಗಂಡನ ವಿರುದ್ಧ ಜೀವನಾಂಶ ಕೋರಿ ಕೇಸು ಈ ಹಿಂದೆ ಮಾಡಿದ್ದೇನು. ಆ ಸಮಯದಲ್ಲಿ ನನ್ನ ಗಂಡ ತೀರಿ ಹೋದನು . ನಾನು ಹಾಕಿದ್ದ ಜೀವನಾಂಶ ಕೇಸು ವಜಾ ಆಗಿರುತ್ತದೆ. ನಾನು ಹೆಂಡತಿ ಅಲ್ಲ ಎಂದು ನ್ಯಾಯಾಲಯ ಅಭಿಪ್ರಾಯ ಪಟ್ಟು ನನ್ನ ಕೇಸು ವಜಾ ಮಾಡಿದೆ ಎಂದರೆ ಸರಿ . ಪ್ರತಿವಾದಿ 1 ರಿಂದ 4 ಮುಗಪ್ಪನ ಮತ್ತು ಮಹಾದೇವಿಯ ಮಕ್ಕಳು ಎಂದರೆ ಸಾಕ್ಷಿದಾರ ಕಾನೂನು ಬಾಹಿರ ಮಕ್ಕಳು ಎನ್ನುತ್ತಾರೆ. ಪ್ರತಿವಾದಿ 5 ನೇ ಯವರೇ ಮೂಗಪ್ಪನ ಕಾನೂನು ಬದ್ಧ ಹೆಂಡತಿ ಎಂದರೆ ಸುಳ್ಳು. ಪ್ರತಿವಾದಿ 1 ರಿಂದ 4, ಪ್ರತಿವಾದಿ 1 ಮತ್ತು 5 ನೇ ಯವರ ಕಾನೂನು ಬದ್ಧ ಮಕ್ಕಳು ಎಂದರೆ ಸರಿಯುಲ್ಲ. ದಾವಾ ಸ್ವತ್ತುಗಳು ಪ್ರತಿವಾದಿ 1 ರಿಂದ 5 ನೇಯವರ ವಹಿವಾಟಿನಲ್ಲಿದೆ ಎಂದರೆ ಸುಳ್ಳು. ನಾನು ಪ್ರತಿವಾದಿಗಳಿಂದ ಹೇಗದರೂ ಮಾಡಿ ಆಸ್ತಿ ಕಬಳಿಸಲು ಸುಳ್ಳು ಕೇಸು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 19 ಮದುವೆ ಆಮಂತ್ರಣ ಪತ್ರಿಕೆ ಸೃಷ್ಠಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೂಗಪ್ಪನ ಜೊತೆ ಮದುವೆಯೇ ಆಗಿಲ್ಲ

ಎಂದರೆ ಸರಿಯಲ್ಲ. ನಾನು ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿಯನ್ನು ಹಾಜರು ಮಾಡಿಯೇ ಇಲ್ಲ ಎಂದರೆ ಸರಿಯಲ್ಲ.

4. ಓ ಎಸ್ ನಂಃ 50/2015 ರ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಹಾಕಿದ್ದೇನು ಎಂದರೆ ಸರಿಯಲ್ಲ. ನಾನು ಆ ದಾವೆಯನ್ನು ವಾಪಸ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಂಡತಿ ಅಲ್ಲ ಎಂದು ಖಾತರಿ ಆಗಿದ್ದರಿಂದ ಆ ದಾವೆಯನ್ನು ಹಿಂಪಡೆದು ಈ ಸುಳ್ಳು ದಾವೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಮೂಗಪ್ಪ ನನ್ನ ತಾಯಿಯ ತಮ್ಮನಾಗಿದ್ದರಿಂದ ಮತ್ತು ಆತನಿಗೆ ಆಸ್ತಿಯಲ್ಲಿ ಪಾಲು ಇದ್ದುದ್ದರಿಂದ ಹೇಗಾದರೂ ಮಾಡಿ ಕಬಳಿಸಲು ಈ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೂ ಮೂಗಪ್ಪನಿಗೆ ಸಂಬಂಧವೇ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ. ಇದೆ .

Sd/-
ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ
ನವಲಗುಂದ.